ಅವರಿಗಿರುವ ಗೌರವಧನವನ್ನು 600 ರೂಪಾಯಿಗಳಿಂದ 900 ರೂಪಾಯಿಗಳಿಗೆಹೆಚ್ಚು ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ಆದೇಶ ನೀಡಿದೆ. ಈ ಆದೇಶವನ್ನು ಅನುಷ್ಠಾನಗೊಳಿಸಲಿಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಮಿತ್ರರಾದ್ ಪಾಟೀಲರು ಎತ್ತಿರುವ ವಿಚಾರ ಸರಿ. ಕೆ.ಎ.ಟಿಯಲ್ಲಿ ಹೋಗಿ ಅವರು ಒಂದು ಅಜ್ಜಿಯನ್ನು ತಂದಿದ್ದಾರೆ. ಇದರ ಬಗ್ಗೆ ಕೆ.ಎ.ಟಿ.ಯಲ್ಲಿ ಕೊಟ್ಟಿರುವ ಅಜ್ಜಿ ಏನೆಂದರೆ ಅವರು ಸರ್ಕಾರದ ಕೆಲಸವನ್ನುಮಾಡುತ್ತಿರುವ ಸಂದರ್ಭದಲ್ಲಿ ಅವರಿಗೆ ಕೊಡತಕ್ಕಂಥ ವೇತನ ಏನು ಇದೆ ಅದು ಕ್ಲಾಸ್ 'ಡಿ' ವರ್ಗದ ನೌಕರರರ ವೇತನಕ್ಕೆ ಸರಿಸಮಾನವಾಗಿ ಇರಬೇಕು. ಅದರಲ್ಲಿ ತಾರತಮ್ಯ ಇರಬಾರದು ಮತ್ತು ಅವರಿಗೆ ಕೊಡಬೇಕಾಗಿರುವ ವೇತನವನ್ನು 900 ರೂಪಾಯಿಗಳಿಗೆ ಹೆಚ್ಚಿಸಿ ಕನಿಷ್ಠ ವೇತನವನ್ನು ಕೊಡಿಸಬೇಕು ಎಂದು ಹೇಳಿದ್ದಾರೆ. ಮತ್ತು ಇವರನ್ನು ನಾಳೆ ಸರ್ಕಾರದಲ್ಲಿ ಯಾವ ರೀತಿ ಸೇರಿಸಿಕೊಳ್ಳಬೇಕು ಎಂದು ಹೇಳುವ ಬಗ್ಗೆ ಒಂದು ಸ್ಕೀಮನ್ನು ತಯಾರು ಮಾಡಬೇಕು ಎಂದು ಹೇಳಿದ್ದಾರೆ. ಇದು ನಮಾಮ ಗಮನಕ್ಕೆ ಬಂದಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸಚಿವ ಸಂಪುಟದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಒಂದು ಸಚಿವ ಸಂಪುಟದ ಉಪ ಸಮಿತಿಯನ್ನೂ ಸಹ ನಾವು ಮಾಡಿದ್ದೇವೆ. ಇದು ಕೇವಲ ಅವರಿಗೆ ಮಾತ್ರ ಸಂಬಂಧಪಟ್ಟಿದಲ್ಲ. ಇದು ಸಮಗ್ರವಾಗಿ ಅಂಗನವಾಡಿಗೆ ಬರುತ್ತದೆ, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಮೋಟಿವೇಟರ್ಸ್ ಇದ್ದಾರೆ ಮತ್ತು ಬಾಕಿ ಇರುವ ಇಲಾಖೆಯಲ್ಲಿ ಪೊಲೀಸ್ ಪಟೇಲ್ಸ್ ಇದ್ದಾರೆ. ಹೀಗೆ ಸುಮಾರು 25 ಸಾವಿರ ಜನ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥವರಿದ್ದಾರೆ. ಅದುದರಿಂದ ನಾನು ಹೇಳುತ್ತಿದ್ದೇನೆ. ಸಚಿವಸಂಪುಟದ ಉಪ ಸಮಿತಿಯ ಸಭೆಯನ್ನು ಕರೆದು ತಾವು ಇದರ ಬಗ್ಗೆ ಸಮಗ್ರವಾದ ವಿಚಾರವನ್ನು ಮಾಡಿ ಇವರ ಈ ಸೇವಾ ಅವಧಿಯನ್ನು ಮುಂದುವರೆಸುವುದಕ್ಕೆ ಈಗ ಸರ್ಕಾರ ತೀರ್ಮಾನವನ್ನು ಕೈಗೊಂಡಿದೆ ಮತ್ತು ಅವರಿಗೆ 900 ರೂಪಾಯಿಗಳ ವೇತನ ಕೊಡುವುದಕ್ಕೆ ಸಹ ತೀರ್ಮಾನವನ್ನು ತೆಗೆದುಕೊಂಡಿದೆ.

ವಿಷಯ : ಕಳ್ಳಂಬೆಳ್ಳ ವಿಧಾನ ಸಭಾಕ್ಷೇತ್ರದಲ್ಲಿರುವ ಕೆರೆಗಳು ಖಾಲಿಯಾಗಿರುವುದು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಸಭಾಪತಿಗಳೇ, ಕಳ್ಳಂಬೆಳ್ಳ ಮತ್ತು ಕಜ್ಜೆನಹಳ್ಳಿ, ಭೂಪಸಂದ್ರದ ಕೆರೆಗಳ ಹಿಂದೆಯಾರತಕ್ಕಂಥ ಅಚ್ಚುಕಟ್ಟು ಕೆರೆಯಲ್ಲಿ ನೀರು ಸಂಪೂರ್ಣವಾಗಿ ಖಾಲಿಯಾಗಿದೆ. ಈಗಾಗಲೇ 5 ಸಾವಿರ ಎಕರೆಗೂ ಹೆಚ್ಚು ಇವೊತ್ತು ಬೆಳೆ ಒಣಗತಕ್ಕ ಪರಿಸ್ಥಿತಿ ಬಂದಿದೆ.

ಈಗ ಕೆರೆಗೆ ನೀರು ತರಲಿಕ್ಕೆ ಆಗುವುದಿಲ್ಲ. ಆದರೂ ಕೂಡ ಅವರಿಗೆ ಬೇಕಾಗಿರತಕ್ಕಂಥ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕೆಂಬ ಬಗ್ಗೆ ನಾನು ಗಮನಸೆಳೆಯುವ ಸೂಚನೆ ಪ್ರಕಾರ ಪ್ರಸ್ತಾಪ ಮಾಡಿದ್ದೆ. ಆದಕ್ಕೆ ಕಾಲಾವಕಾಶ ಇಲ್ಲದೆ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಇದಕ್ಕೆ ಸಚಿವರಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ. ಅವತ್ತು 18ನೇ ತಾರೀಖು ಒಂದು ಸಭೆ ಮಾಡಿ ರೈತರು ಸೂಪರಿಂಟೆಂಡೆಂಟ್ ಇಂಜಿನಿಯರ್ ಮತ್ತು ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಇದ್ದ ಸಂದರ್ಭದಲ್ಲಿ ಅವರ ಎದುರಿಗೆ ರೈತರು ಒಂದು ಬೇಡಿಕೆ ಮುಂದಿಡಲಿಕ್ಕೆ ಹೋದ ಸಂದರ್ಭದಲ್ಲಿ ಅವರ ಮೇಲೆ ಲೂಟಿ ಚಾರ್ಜ್ ಮಾಡಿ ಆ ಗುಂಪನ್ನು ಚದುರಿಸಿ ಗಲಾಟೆಯಾಗಿ ವಿನಾಕಾರಣ ಸುಮಾರು 50-60 ಜನರ ಮೇಲೆ ಕೇಸ್ ಹಾಕುವ ಪ್ರಯತ್ನ ಆಗಿದೆ. ದಯಮಾಡಿ ಅವರು ಯಾವುದೇ ರೀತಿಯಿಂದ ಹಿಂಸೆಯನ್ನು ಮಾಡಬೇಕೆಂಬ ದೃಷ್ಟಿಯಿಂದ ಆ ಚಳುವಳಿ ಮಾಡಿಲ್ಲ. ಅವರ ಬೇಡಿಕೆಯನ್ನು ಸಲ್ಲಿಸಬೇಕೆಂದು ಹೋದ ರೈತರುಗಳ ಮೇಲೆ, ಅಮಾಯಕರ ಮೇಲೆ ಇವೊತ್ತು ಕ್ರಿಮಿನಲ್ ಕೇಸ್ ಹಾಕಿದ್ದಾರೆ. ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದು ಸೂಪರಿಂಟೆಂಡೆಂಟ್ ಎಂಜಿನಿಯರ್ ಅವರ ಎದುರಿಗೆ ಆಗಿರತಕ್ಕಂಥಾದ್ದು. ಅವರ ಬೆಳೆಯನ್ನು ಸಂಪೂರ್ಣವಾಗಿ ಉಳಿಸತಕ್ಕ ಜವಾಬ್ದಾರಿ ನಿಮ್ಮದು. ಅದಕ್ಕೆ ಯಾವ ರೀತಿ ಕ್ರಮ ಕೈಗೊಳ್ಳುತ್ತೀರಿ ಎಂಬುದಕ್ಕೆ ಉತ್ತರ ಕೊಡಬೇಕು.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುಚ್ಛಕ್ತಿ ರಾಜ್ಯಸಚಿವರು) : ಅಧ್ಯಕ್ಷರೇ ಈಗಾಗಲೇ ಒಂದು ವಾರದಿಂದ ಪ್ರಸ್ತಾವನೆಯನ್ನು ಮಾಡಿದ್ದಾರೆ. ಈಗಾಗಲೇ ತುಮಕೂರು ಜಿಲ್ಲೆ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರು ಅಲ್ಲಿಯ ರೈತರನ್ನು ಕರೆಸಿ ಮಾತುಕತೆ ಮಾಡಿದ್ದಾರೆ. ಈಗಾಗಲೇ ಎರಡು ಬ್ಯಾಚ್ ಮಾಡಿ ವಿದ್ಯುತ್ ವಿತರಣೆಯನ್ನು 8 ಗಂಟೆಗಳ ಕಾಲ ಪೂರ್ತಿಯಾಗಿ ಕೊಡುತ್ತಿದಾರೆ ಇನ್ನೂ ಹೆಚ್ಚಿನ ಅವಶ್ಯಕತೆ ಕಂಡುಬಂದಲ್ಲಿ ಸರ್ಕಾರ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಾವು ಕೆ.ಇ.ಬಿ. ಇಲಾಖೆ ಅಧಿಕಾರಿಯವರಿಗೆ ಸೂಕ್ತ ಆದೇಶವನ್ನು ಕೊಡುತ್ತೇವೆ.

ಅ) ಪಾಜಕದಲ್ಲಿ ಗಣಿಗಾರಿಕೆ ನಡೆಯುತ್ತಿರುವುದು

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆನು. ಪೂಜ್ಯ ಮಧ್ವಾಚಾರ್ಯರು ಹುಟ್ಟಿದಂಥ ಸ್ಥಳ ಪಾಜಕದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಡೈನಮೆಂಟ್‌ನಿಂದ ಬ್ಲಾಸ್ಟ್ ಮಾಡುತ್ತಿದ್ದಾರೆ. ಅದರಿಂದ ಜನರು ಸತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅಲ್ಲಿ ಗಣಿಗಾರಿಕೆಯನ್ನು ನಿಲ್ಲಿಸುತ್ತೀರಾ?